☎ Ph : 2768 3377

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

## "ಅಭಿವೃದ್ಧಿ ನಕ್ಷೆ ಅನುಮೋದನೆ ಪತ್ರ"

**ವಿಷಯ :** **ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ 132/1 ರಲ್ಲಿ (3ಎ-37ಗು), 132/2 ರಲ್ಲಿ (31ಗು), 133/1 ರಲ್ಲಿ (33ಗು), 133/2 ರಲ್ಲಿ (33ಗು), 133/3 ರಲ್ಲಿ (1ಎ-26ಗು), 135/1 ರಲ್ಲಿ (1ಎ-03ಗು) ಮತ್ತು 136/1 ರಲ್ಲಿ (1ಎ-02ಗು) ಒಟ್ಟು 10ಎಕರೆ 5ಗುಂಟೆ ಅಥವಾ (40973.85 ಚ.ಮೀ) ವಿಸ್ತೀರ್ಣದ ಜಮೀನಿನಲ್ಲಿ "ವಸತಿ ಉಪಯೋಗದ" "ಅಭಿವೃದ್ಧಿ ನಕ್ಷೆ" ಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.**

**ಉಲ್ಲೇಖ :** 1) ಅರ್ಜಿದಾರರು ಸಲ್ಲಿಸಿರುವ ಅರ್ಜಿ ಸಂಖ್ಯೆ 3420, ದಿನಾಂಕ : 29/08/2017.

2) ಸರ್ಕಾರದ ಆದೇಶ ಸಂಖ್ಯೆ: ನಅಇ233ಬಿಎಂಆರ್2010 ಬೆಂಗಳೂರು ದಿನಾಂಕ: 11-02-2011, ನಅಇ17ಬಿಎಂಆರ್2013 ಬೆಂಗಳೂರು ದಿನಾಂಕ: 08/02/ 2013. ನಅಇ84ಬಿಎಂಆರ್2015 ಬೆಂಗಳೂರು ದಿನಾಂಕ:17/02/2016, ನಅಇ125 ಬಿಎಂಆರ್2015 ಬೆಂಗಳೂರು ದಿನಾಂಕ:19/11/2015 ಮತ್ತು ನಅಇ55ಬಿಎಂಆರ್ 2012 ಬೆಂಗಳೂರು ದಿನಾಂಕ:21/04/2012 ಮತ್ತು ಈ ಕಛೇರಿಯ ಭೂ ಉಪಯೋಗ ಬದಲಾವಣೆ ಆದೇಶ ಪತ್ರ ಸಂಖ್ಯೆ:ಬಿಐಎಎಪಿಎ/ಟಿಪಿ1/ಭೂಉಬ /05/2011-12 ದಿ:30-04-2012, ಬಿಐಎಎಪಿಎ/ಟಿಪಿ2/ಭೂಉಬ /2ಎ/2014-15 ದಿ:29-03-2016, ಬಿಐಎಎಪಿಎ/ಟಿಪಿ1/ಭೂಉಬ/04/ 2014-15 ದಿ:02-12-2015, ಬಿಐಎಎಪಿಎ/ಟಿಪಿ1/ಭೂಉಬ/47/2009-10 ದಿ:15-02-2011 ಮತ್ತು ಬಿಐಎಎಪಿಎ/ಟಿಪಿ1/ಭೂಉಬ/06/2011-12, ದಿ: 04-03-2013.

3) ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊರಡಿಸಿರುವ ಅದಿಕೃತ ಜ್ಞಾಪನ ಪತ್ರಗಳ ಸಂಖ್ಯೆ: ಬಿಡಿಎಸ್/ಎಎಲ್‌ಎನ್‌ಎಸ್‌ಆರ್(ಎನ್.ಎ)/ 550/2004-05, ದಿನಾಂಕ: 08-04-2005, ಎಎಲ್‌ಎನ್/(ಜಾಲ)/ಎಸ್‌ಆರ್/ 81/13-14, ದಿನಾಂಕ: 14-05-2014, ಬಿಡಿಎಸ್/ಎಎಲ್‌ಎನ್‌ಎಸ್‌ಆರ್(ಎನ್.ಎ)/ 04/2002-03, ದಿನಾಂಕ: 05-07-2002, ಎಎಲ್‌ಎನ್(ಜಾಲ)ಎಸ್‌ಆರ್/82/ 13-14 ದಿನಾಂಕ: 14-05-2014.

4) ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂ.ಆರ್/2005, ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009.

5) ದಿನಾಂಕ: 24/02/2018 ರಂದು ನಡೆದ ಪ್ರಾಧಿಕಾರದ 121 ನೇ ಸಭೆಯ ವಿಷಯ ಸಂಖ್ಯೆ: 121 [20(37)] ರ ಬಗ್ಗೆ ಕೈಗೊಂಡ ನಿರ್ಣಯ.

6) ಶುಲ್ಕ ಪಾವತಿಸಲು ತಿಳಿಸಿ ಅರ್ಜಿದಾರರಿಗೆ ಬರೆದಿರುವ ಈ ಪ್ರಾಧಿಕಾರದ ಸಮಸಂಖ್ಯೆಯ ಪತ್ರ ದಿನಾಂಕ: 02/04/2018.

7) ಅರ್ಜಿದಾರರು ಪ್ರಾಧಿಕಾರದ ರಶೀದಿ ಸಂಖ್ಯೆ: 8945, ದಿನಾಂಕ: 13-04-2018

ರಂತೆ ರೂ 10,30,000/-ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

8) ದಿನಾಂಕ: 19/07/2018 ರ ಮನವಿ ಪತ್ರದೊಂದಿಗೆ ಪ್ರಸ್ತಾಪಿತ ಅಭಿವೃದ್ಧಿ ನಕ್ಷೆಯಲ್ಲಿ ಸ.ನಂ 132/2 ಮತ್ತು 136/2 ರ ಜಮೀನುಗಳಲ್ಲಿ 15.24 ಮೀಟರ್ ಅಗಲದ ರಸ್ತೆಗಾಗಿ ಕಾಯ್ದಿರಿಸಿರುವ ಜಾಗಗಳನ್ನು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಸಾತನೂರು ಗ್ರಾಮ ಪಂಚಾಯ್ತಿ ರವರಿಗೆ ಹಸ್ತಾಂತರಿಸಿರುವ ಕುರಿತು ಹಿರಿಯ ಉಪನೋಂದಣಾಧಿಕಾರಿ, ಯಲಹಂಕ, ಬೆಂಗಳೂರು ರವರ ಕಛೇರಿಯ ಒಂದನೇ ಪುಸ್ತಕದ ದಸ್ತಾವೇಜು ಸಂಖ್ಯೆ: YAN-1-03591-2018-19 ಆಗಿ ಸಿ.ಡಿ.ನಂಬರ್ YAND 666 ನೇ ದ್ದರಲ್ಲಿ ದಿನಾಂಕ: 17-07-2018 ಮತ್ತು ಅಭಿವೃದ್ಧಿ ನಕ್ಷೆಯಲ್ಲಿ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಪ್ರದೇಶಗಳನ್ನು ಕಾಯ್ದಿರಿಸಿರುವ ಜಾಗಗಳನ್ನು ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ, ರವರಿಗೆ ಹಸ್ತಾಂತರಿಸಿರುವ ಕುರಿತು ಹಿರಿಯ ಉಪನೋಂದಣಾಧಿಕಾರಿ, ಯಲಹಂಕ, ಬೆಂಗಳೂರು ರವರ ಕಛೇರಿಯ ಒಂದನೇ ಪುಸ್ತಕದ ದಸ್ತಾವೇಜು ಸಂಖ್ಯೆ: YAN-1-03596-2018-19 ಆಗಿ ಸಿ.ಡಿ.ನಂಬರ್ YAND 666 ನೇ ದ್ದರಲ್ಲಿ ದಿನಾಂಕ: 17-07-2018 ರಂದು ನೋಂದಾಯಿಸಿರುವ ಮೂಲ ಪರಿತ್ಯಾಜನಾ ಪತ್ರವನ್ನು ಸಲ್ಲಿಸಿರುತ್ತಾರೆ.

***********

ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಸ್ಯಾಮೀಸ್ ಡ್ರೀಮ್ಲ್ಯಾಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್ ರವರ ಪರವಾಗಿ ಜಿಪಿಎದಾರರಾದ ಮೆ॥ ಪೂರ್ವಂಕರ್ ಲಿಮಿಟೆಡ್ ಇವರು ಉಲ್ಲೇಖ (1) ರಂತೆ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, **ಹೊಸಹಳ್ಳಿ ಗ್ರಾಮದ ಸ.ನಂ 132/1 ರಲ್ಲಿ (3ಎ-37ಗು), 132/2 ರಲ್ಲಿ (31ಗು), 133/1 ರಲ್ಲಿ (33ಗು), 133/2 ರಲ್ಲಿ (33ಗು), 133/3 ರಲ್ಲಿ (1ಎ-26ಗು), 135/1 ರಲ್ಲಿ (1ಎ-03ಗು) ಮತ್ತು 136/1 ರಲ್ಲಿ (1ಎ-02ಗು) ಒಟ್ಟು 10ಎಕರೆ 05ಗುಂಟೆ ಅಥವಾ (40973.85 ಚ.ಮೀ)** ವಿಸ್ತೀರ್ಣದ ಪ್ರದೇಶದಲ್ಲಿ "ವಸತಿ ಉಪಯೋಗದ" "ಅಭಿವೃದ್ಧಿ ನಕ್ಷೆ" ಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ – 2021 ರಂತೆ ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಲ್ಲಿ ಕಾಯ್ದಿರಿಸಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶಗಳನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳ ಪೈಕಿ ಪ್ರಶ್ನಿತ ಪ್ರದೇಶಗಳು ಸಹ ಒಳಗೊಂಡಿದ್ದು, ಸರ್ಕಾರದ ಆದೇಶದಲ್ಲಿನ ಷರತ್ತು ಸಂಖ್ಯೆ (1) ರನ್ವಯ ನಿಗಧಿತ ಶುಲ್ಕಗಳನ್ನು ಈ ಪ್ರಾಧಿಕಾರಕ್ಕೆ ಪಾವತಿಸಿಕೊಂಡು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಆದೇಶಗಳನ್ನು ಈ ಪ್ರಾಧಿಕಾರದಿಂದ ಹೊರಡಿಸಲಾಗಿರುತ್ತದೆ.

ಉಲ್ಲೇಖ (3) ರನ್ವಯ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರು "ವಸತಿ" ಮತ್ತು "ವಾಣಿಜ್ಯ" ಉದ್ದೇಶಕ್ಕಾಗಿ ಭೂ ಪರಿವರ್ತನಾ ಆದೇಶವನ್ನು ಹೊರಡಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸದರಿ ವಸತಿ ಅಭಿವೃದ್ಧಿ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ಉಲ್ಲೇಖ (5) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಪ್ರಸ್ತಾವನೆಯಲ್ಲಿರುವ ಜಮೀನಿಗೆ

☎ Ph : 2768 3377

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಉಲ್ಲೇಖ (04) ರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ರ ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯು ಅನುಮೋದನೆಗೊಂಡಿದ್ದು, ಸದರಿ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17(2) ರಡಿಯಲ್ಲಿ ವಸತಿ ಉಪಯೋಗದ "ಅಭಿವೃದ್ಧಿ ನಕ್ಷೆ" ಗೆ ಅನುಮೋದನೆ ನೀಡಲು ನಿರ್ಣಯಿಸಿದೆ.

ಉಲ್ಲೇಖ (6) ರಂತೆ ಈ ಪ್ರಾಧಿಕಾರದಿಂದ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುತ್ತದೆ. ಉಲ್ಲೇಖ (7) ರಂತೆ ಅರ್ಜಿದಾರರು ಈ ಪ್ರಾಧಿಕಾರಕ್ಕೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

ಉಲ್ಲೇಖ (8) ರಂತೆ ಅರ್ಜಿದಾರರು ಸದರಿ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಸ.ನಂ 132/2 ಮತ್ತು 136/2 ರಲ್ಲಿ 15.24 ಮೀಟರ್ ಅಗಲದ ರಸ್ತೆಗಾಗಿ ಕಾಯ್ದಿರಿಸಿರುವ ಜಾಗವನ್ನು ಸಾತನೂರು ಗ್ರಾಮ ಪಂಚಾಯಿತ್ತಿಗೆ ಹಾಗೂ ಉದ್ಯಾನವನ ಮತ್ತು ನಾಗರೀಕ ಸೌಲಭ್ಯದ ಪ್ರದೇಶಗಳನ್ನು ಈ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ಕುರಿತು ನೋಂದಾಯಿತ ಪರಿತ್ಯಾಜನಾ ಪತ್ರಗಳನ್ನು ಹಾಗೂ ಅಭಿವೃದ್ಧಿ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಆದ ಕಾರಣ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ನಂ. ಬಿಐಎಎಪಿಎ/ಟಿಪಿ2/ಡಿಪಿ/05/2017-18** | 785 **ದಿನಾಂಕ:** 27 JUL 2018

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, **ಹೊಸಹಳ್ಳಿ ಗ್ರಾಮದ ಸ.ನಂ 132/1 ರಲ್ಲಿ (3ಎ–37ಗು), 132/2 ರಲ್ಲಿ (31ಗು), 133/1 ರಲ್ಲಿ (33ಗು), 133/2 ರಲ್ಲಿ (33ಗು), 133/3 ರಲ್ಲಿ (1ಎ–26ಗು), 135/1 ರಲ್ಲಿ (1ಎ–03ಗು) ಮತ್ತು 136/1 ರಲ್ಲಿ (1ಎ–02ಗು) ಒಟ್ಟು 10ಎಕರೆ 05ಗುಂಟೆ ಅಥವಾ (40973.85 ಚ.ಮೀ)** ವಿಸ್ತೀರ್ಣದ ಜಮೀನಿನಲ್ಲಿ "ವಸತಿ ಉಪಯೋಗದ" "ಅಭಿವೃದ್ಧಿ ನಕ್ಷೆ" ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17(2) ರನ್ವಯ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಿದೆ.

1) ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶವನ್ನು ಅನುಮೋದಿತ ಅಭಿವೃದ್ಧಿ ನಕ್ಷೆಯಂತೆ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು.

2) ಅಭಿವೃದ್ಧಿ ನಕ್ಷೆಯಲ್ಲಿ ಬರುವ ಕಟ್ಟಡಗಳಿಗೆ ನಿಯಮಾನುಸಾರ ಕಟ್ಟಡ ನಕ್ಷೆಗೆ ಅನುಮೋದನೆ ಪಡೆದುಕೊಳ್ಳುವ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿ, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ, ಅಗ್ನಿ ಶಾಮಕ ದಳ ಇಲಾಖೆ, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ ಮತ್ತು ಬಿಎಸ್‌ಎಲ್‌ಎನ್ ರವರಿಂದ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿ ನಂತರ ಕಟ್ಟಡ ನಕ್ಷೆ ಅನುಮೋದನೆಯನ್ನು ಪಡೆಯತಕ್ಕದ್ದು.

3) ಪ್ರಸ್ತಾವಿತ ಅಭಿವೃದ್ಧಿ ನಕ್ಷೆಯಲ್ಲಿ ಸೂಕ್ತವಾದ ಕಡೆ ಪ್ರಮಾಣಿಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟನ್ನು ಸ್ಥಾಪಿಸಬೇಕು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ

ನೀರಾಕ್ಷೇಪಣಾ ಪತ್ರದ ಸಂಖ್ಯೆ: PCB/781/CNP/171/H-93 ದಿನಾಂಕ: 25/04/2018 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.

4) ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಅಭಿವೃದ್ಧಿ ನಕ್ಷೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬಾರದು.

5) ಈ ಪ್ರಸ್ತಾವಿತ ಪ್ರದೇಶದಲ್ಲಿ ಬರುವ ಖರಾಬು ಜಮೀನುಗಳನ್ನು ಯಥಾ ಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.

6) ಅನುಮೋದಿತ ವಸತಿ ಅಭಿವೃದ್ಧಿ ನಕ್ಷೆಯಂತೆ ಸೂಕ್ತ ಸ್ಥಳಗಳಲ್ಲಿ (RWH) ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

7) ಅನುಮೋದಿತ ಅಭಿವೃದ್ಧಿ ನಕ್ಷೆಯಂತೆ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ, ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ಪ್ರದೇಶಗಳನ್ನು ಯಾವುದೇ ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.

8) ಅಭಿವೃದ್ಧಿ ನಕ್ಷೆಯಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

9) ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲಿಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

10) ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

11) ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಾಚಾರಿ ಮಾರ್ಗವನ್ನು (Paved Footpath) ನಿರ್ಮಿಸುವುದು.

12) ನೀರು ಸರಬರಾಜು ವ್ಯವಸ್ಥೆ ಬಗ್ಗೆ ಸರ್ಕಾರವು ಮುಂದೆ ವಿಧಿಸುವ ಯಾವುದೇ ಹೆಚ್ಚಿನ ಶುಲ್ಕಗಳನ್ನು ಅಭಿವೃದ್ಧಿದಾರರೇ ಭರಿಸಲು ಬದ್ಧರಾಗಿರಬೇಕು.

13) ಅಭಿವೃದ್ಧಿ ನಕ್ಷೆಯಲ್ಲಿನ ನೀರಿನ ಪೂರೈಕೆಗೆ ಅನುಗುಣವಾಗಿ ಅಗತ್ಯ ಮೇಲ್ಮಟ್ಟದ ನೀರಿನ ಟ್ಯಾಂಕ್ (Over Head Tank) ಅನ್ನು ಕಡ್ಡಾಯವಾಗಿ ಅಳವಡಿಸುವುದು.

14) ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಆಗುವ ಅನಾನುಕೂಲಗಳ ಬಗ್ಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

15) ಅಭಿವೃದ್ಧಿ ನಕ್ಷೆ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ ಮಾಲೀಕತ್ವ ದಾಖಲೆ, ಸರ್ವೆ ನಕಾಶೆ ಮತ್ತು ಖರಾಬು ಜಾಗಗಳ ಬಗ್ಗೆ ಸಲ್ಲಿಸಿರುವ ಮಾಹಿತಿ/ದಾಖಲೆ ಮತ್ತು ಇತರೆ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಅಥವಾ

☎ Ph : 2768 3377

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.in

ಪೋರ್ಜರಿಯಾಗಿದ್ದಲ್ಲಿ ಅಭಿವೃದ್ಧಿ ನಕ್ಷೆಗೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

16) ಪ್ರಸ್ತಾಪಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಕಾಯ್ದಿರಿಸಲಾದ ಸರ್ಕಾರದ ಖರಾಬು ಜಾಗಗಳು ಇದ್ದಲ್ಲಿ ಯಥಾರೀತಿಯಾಗಿ ಕಾಯ್ದಿರಿಸತಕ್ಕದ್ದು. ಯಾವುದೇ ಒತ್ತುವರಿ ಮಾಡತಕ್ಕದ್ದಲ್ಲ ಹಾಗೂ ಅರ್ಜಿದಾರರು ಸರ್ಕಾರದ ಖರಾಬು ಬಗ್ಗೆ ತಪ್ಪು ಮಾಹಿತಿ ನೀಡಿ, ಅನುಮೋದನೆ ಪಡೆದಿದ್ದಲ್ಲಿ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯು ತಂತಾನೆ ರದ್ದಾಗುತ್ತದೆ ಹಾಗೂ ರಾಜ ಕಾಲುವೆಗಳು ಇದ್ದಲ್ಲಿ ನಿಯಮಾನುಸಾರ ಬಫರ್ ಬಿಡುವ ಷರತ್ತಿಗೊಳಪಟ್ಟಿರುತ್ತದೆ.

17) ಮೇಲ್ಕಂಡ ಯಾವುದೇ ಷರತ್ತುಗಳು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಅಭಿವೃದ್ಧಿ ನಕ್ಷೆಯ ಮಂಜೂರಾತಿ ಆದೇಶ ಕೂಡಲೇ ರದ್ದಾಗುವುದು. ಈ ಅನುಮತಿಯನ್ನು ಯಾವುದೇ ಪೂರ್ವ ಮಾಹಿತಿ ನೀಡದೇ ರದ್ದುಪಡಿಸುವ ಹಾಗೂ ಕಾನೂನು ಕ್ರಮ ಜರುಗಿಸುವ ಹಕ್ಕು ಪ್ರಾಧಿಕಾರಕ್ಕೆ ಇರುತ್ತದೆ.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಬಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 17 (4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

27.07.2018

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ
ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

***ಇವರಿಗೆ :***

**ಮೆ॥ ಸ್ಯಾಮೀಸ್ ಡ್ರೀಮ್‌ಲ್ಯಾಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್ ರವರ**
**ಪರವಾಗಿ (ಜಿಪಿಎ ಹೊಲ್ಡಾರ್ ಮೆ॥ ಪೂರ್ವಂಕರ್ ಲಿಮಿಟೆಡ್),**
**ನಂ.130/1, ಅಲಸೂರು ರಸ್ತೆ, ಬೆಂಗಳೂರು-560042**

***ಪ್ರತಿಯನ್ನು :-***

1) ಉಪನೋಂದಣಾಧಿಕಾರಿಗಳು, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಬೆಂಗಳೂರು ಜಿಲ್ಲೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2) ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಸಾತನೂರು ಗ್ರಾಮ ಪಂಚಾಯ್ತಿ, ಬೆಂಗಳೂರು ಉತ್ತರ (ಅಪರ)ತಾಲ್ಲೂಕು, ಬೆಂಗಳೂರು ಜಿಲ್ಲೆ ರವರಿಗೆ ಅನುಮೋದಿತ ವಸತಿ ಉಪಯೋಗದ "ಅಭಿವೃದ್ಧಿ ನಕ್ಷೆ" ಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
3) ಕಛೇರಿ ಪ್ರತಿ.